8-3-22 118

**ಶ್ರೀ ಗೋವಿಂದರಾಜು, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು, ಕರ್ನಾಟಕ ವಿಧಾನ ಪರಿಷತ್ತು ರವರ ಬೆಳೆಗಳಿಗೆ ಸಿಂಪಡಿಸುವ ಕೀಟನಾಶಕ ಔಷಧಿ ಗುಣಮಟ್ಟವನ್ನು ಪರೀಕ್ಷಿಸಲು ಪ್ರಯೋಗಾಲಯ ಮತ್ತು ಔಷಧ ನಿಯಂತ್ರಣ ಮಂಡಳಿಯನ್ನು ತೆರೆಯುವ ಬಗ್ಗೆ ನಿಯಮ 72 ರಡಿ ಗಮನ ಸೆಳೆಯುವ ಸೂಚನೆಗೆ ಮಾಹಿತಿ.**

**ವಿಷಯ:**

ಕೃಷಿ ಬೆಳೆಗಳಿಗೆ ಹಾಗೂ ತೋಟಗಾರಿಕೆ ಬೆಳೆಗಳಿಗೆ ಸಿಂಪಡಿಸುವ ಕೀಟನಾಶಕ ಔಷಧಿಗಳನ್ನು ತಯಾರಿಸುವ ಮೊದಲು ಇವುಗಳನ್ನು ಪ್ರಯೋಗಾಲಯದಲ್ಲಿ ಪರೀಕ್ಷಿಸಿ, ಈ ಕೀಟನಾಶಕದಿಂದ ಬೆಳೆಗಳ ಮೇಲೆ ಹಾಗೂ ಮಾನವನ ಜೀವನದ ಮೇಲೆ ದುಷ್ಪರಿಣಾಮ ಬೀರುವುದೇ ಇಲ್ಲವೇ ಎಂಬುದನ್ನು ಅನೇಕ ಸಂಶೋಧನೆಗಳನ್ನು ನಡೆಸಿದ ನಂತರವಷ್ಟೆ ರೈತರಿಗೆ ಕೀಟನಾಶಕ ಔಷಧಿಗಳನ್ನು ನೀಡಬೇಕಾಗಿರುವುದು, ಸರ್ಕಾರದ ಕರ್ತವ್ಯವಾಗಿರುತ್ತದೆ. ಇವುಗಳನ್ನು ನಡೆಸಲು ಸರ್ಕಾರದ ಅಡಿಯಲ್ಲಿ ಯಾವುದಾದರೂ ಪ್ರಯೋಗಾಲಯ ತೆರೆದಿದೆಯೇ ಅಥವಾ ಖಾಸಗಿ ಏಜೆನ್ಸಿಗಳಿಗೆ ವಹಿಸಲಾಗಿದೆಯೆ ಎಂಬುದೇ ತಿಳಿಯುತ್ತಿಲ್ಲ. ರಾಜ್ಯದಲ್ಲಿ ಕೀಟನಾಶಕ ಔಷಧಿಗಳನ್ನು ಉತ್ಪಾದಿಸುವ ಅನೇಕ ಕಂಪನಿಗಳಿದ್ದು, ಆ ಔಷಧಿಗಳು ಪ್ರಸ್ತುತ ಮಾರುಕಟ್ಟೆಗಳಲ್ಲಿ ದೊರಕುತ್ತಿದೆ. ಈ ಕೀಟನಾಶಕ ಔಷಧಿಯು ಬಹಳ ಕಳಪೆ ಮಟ್ಟದಿಂದ ಕೂಡಿದ್ದು, ಇವುಗಳನ್ನು ಬೆಳೆಗಳಿಗೆ ಸಿಂಪಡಿಸಿದರೆ, ಬೆಳೆಗಳು ಸಂಪೂರ್ಣವಾಗಿ ಹಾಳಾಗಿದ್ದು, ಇದರಿಂದ ಅನೇಕ ರೈತರು ಸಾಲದ ಸುಳಿಗೆ ಸಿಕ್ಕಿ ನರಳುತ್ತಿದ್ದಾರೆ.

ಮನಷ್ಯರು ಉಪಯೋಗಿಸುವ ಔಷಧಿಗಳನ್ನು ತಯಾರಿಸುವ ಮೊದಲು ಅವುಗಳನ್ನು ನಾನಾ ವಿಧಾನದಲ್ಲಿ ಪರೀಕ್ಷಿಸಿ, ಬೇರೆ ಪ್ರಾಣಿಗಳ ಮೇಲೆ ಪ್ರಯೋಗ ನಡೆಸಿ, ಔಷಧಿಗಳನ್ನು ಉತ್ಪಾದನೆ ಮಾಡುತ್ತಾರೆ. ಇವುಗಳ ಗುಣಮಟ್ಟವನ್ನು ಪರೀಕ್ಷಿಸಲು, ಸರ್ಕಾರದ ವತಿಯಿಂದ, ಔಷಧಿ ನಿಯಂತ್ರಣ ಮಂಡಳಿ ಕಾರ್ಯನಿರ್ವಹಿಸುತ್ತಿದೆ. ಅದೇ ರೀತಿಯಾಗಿ ಕೃಷಿ ಬೆಳೆ ಮತ್ತು ತೋಟಗಾರಿಕೆ ಬೆಳೆಗಳಿಗೆ ಸಿಂಪಡಿಸುವ ಕೀಟನಾಶಕ ಔಷಧಿಗಳ ಗುಣಮಟ್ಟವನ್ನು ಪರೀಕ್ಷಿಸಲು ಸರ್ಕಾರದ ವತಿಯಿಂದ ಪ್ರಯೋಗಾಲಯ ಮತ್ತು ಔಷಧಿ ನಿಯಂತ್ರಣ ಮಂಡಳಿಯನ್ನು ತೆರೆಯುವ ಅವಶ್ಯಕತೆ ಇರುವುದರಿಂದ, ರೈತರ ಹಿತದೃಷ್ಟಿಯಿಂದ ಈ ವಿಷಯವನ್ನು ಮಾನ್ಯ ಕೃಷಿ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

**ಉತ್ತರ:**

ಕೀಟನಾಶಕ ಕಾಯ್ದೆ,1968 ಮತ್ತು ಕೀಟನಾಶಕ ಕಾಯ್ದೆಯನ್ವಯ ರೂಪಿಸಲಾಗಿರುವ ನಿಯಮಗಳನ್ವಯ ಕೀಟನಾಶಕ ಗುಣಮಟ್ಟವನ್ನು ಪರೀಕ್ಷಿಸಲು ರಾಜ್ಯದಲ್ಲಿ ಒಟ್ಟು 6 ರಾಜ್ಯ ಪೀಡೆನಾಶಕ ಪರೀಕ್ಷಣಾ ಪ್ರಯೋಗಾಲಯಗಳನ್ನು ಬೆಂಗಳೂರು, ಬಳ್ಳಾರಿ, ಶಿವಮೊಗ್ಗ, ಧಾರವಾಡ, ಕಲಬುರಗಿ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಸ್ಥಾಪಿಸಲಾಗಿದ್ದು, ಶಿವಮೊಗ್ಗ ಮತ್ತು ಧಾರವಾಡ ಪ್ರಯೋಗಾಲಯಗಳು ಎನ್.ಎ.ಬಿ.ಎಲ್ National Accreditation Board for Testing and Calibration Laboratories (NABL) ಸಂಸ್ಥೆಯಿಂದ ಮಾನ್ಯತೆಯನ್ನು ಪಡೆದಿದ್ದು, ಉಳಿದ ಪ್ರಯೋಗಾಲಯಗಳಿಗೆ ಎನ್.ಎ.ಬಿ.ಎಲ್ ಮಾನ್ಯತೆ ಪಡೆಯುವ ಕಾರ್ಯ ಪ್ರಗತಿಯಲ್ಲಿರುತ್ತದೆ. ರಾಜ್ಯದಲ್ಲಿ ಸ್ಥಾಪಿಸಲಾಗಿರುವ ಎಲ್ಲಾ 6 ಪ್ರಯೋಗಾಲಯಗಳಲ್ಲಿ ಪೀಡೆನಾಶಕಗಳ ಗುಣಮಟ್ಟವನ್ನು ಪರೀಕ್ಷಿಸಲಾಗುತ್ತಿದೆ. ಕೀಟನಾಶಕ ಕಾಯ್ದೆಯ ಸೆಕ್ಷನ್ 19 ಮತ್ತು ಕೀಟನಾಶಕ ನಿಯಮಗಳು, 1971ರ ನಿಯಮ 23 ರನ್ವಯ ಕರ್ನಾಟಕ ಸರ್ಕಾರದಿಂದ ಮೇಲ್ಕಂಡ 6 ಪ್ರಯೋಗಾಲಯಗಳನ್ನು ಅಧಿಸೂಚನೆಗೊಳಿಸಿ ಆದೇಶಿಸಲಾಗಿರುತ್ತದೆ.

..2

ಕೀಟನಾಶಕಗಳ ಆಮದು, ತಯಾರಿಕೆ, ಮಾರಾಟ, ಸಾಗಣೆ, ವಿತರಣೆ ಮತ್ತು ಬಳಕೆಯು ಕೇಂದ್ರ ಸರ್ಕಾರ ಅಧಿಸೂಚನೆಗೊಳಿಸಿರುವ ಕೀಟನಾಶಕ ಕಾಯ್ದೆ, 1968 ಮತ್ತು ಕಾಯ್ದೆಯನ್ವಯ ರೂಪಿಸಲಾಗಿರುವ ನಿಯಮಗಳನ್ವಯ ನಿಯಂತ್ರಣಕ್ಕೆ ಒಳಪಡುವುದರಿಂದ ಸದರಿ ಕಾಯ್ದೆ ಮತ್ತು ನಿಯಮದನ್ವಯ ಕೀಟನಾಶಕ ಪರಿವೀಕ್ಷಕರು ಹಾಗು ವಿಶ್ಲೇಷಕರನ್ನು ಅಧಿಸೂಚನೆಗೊಳಿಸಲಾಗಿರುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಕೀಟನಾಶಕ ನಿಯಂತ್ರಣದ ಬಗ್ಗೆ ಆಡಳಿತ ಮತ್ತು ತಾಂತ್ರಿಕ ವಿಷಯಗಳ ಬಗ್ಗೆ ಸಲಹೆಗಳನ್ನು ನೀಡಲು ಕೀಟನಾಶಕ ಕಾಯ್ದೆಯ ಸೆಕ್ಷನ್ 4 ರನ್ವಯ ಕೇಂದ್ರ ಸರ್ಕಾರದ ವತಿಯಿಂದ ಕೇಂದ್ರೀಯ ಕೀಟನಾಶಕ ಮಂಡಳಿಯನ್ನು ಸ್ಥಾಪಿಸಲಾಗಿರುತ್ತದೆ. ರಾಜ್ಯ ಸರ್ಕಾರಕ್ಕೆ ಕೀಟನಾಶಕ ಕಾಯ್ದೆಯನ್ವಯ ಪ್ರತ್ಯೇಕವಾಗಿ ಕೀಟನಾಶಕ ನಿಯಂತ್ರಣ ಮಂಡಳಿಯನ್ನು ರಚಿಸುವ ಅವಕಾಶ ಇರುವುದಿಲ್ಲ.

ಯಾವುದೇ ಕೀಟನಾಶಕ ತಯಾರಿಕೆ ಮುನ್ನ ಕೀಟನಾಶಕ ಕಾಯ್ದೆಯ ಸೆಕ್ಷನ್ 9 ರನ್ವಯ ಕೇಂದ್ರೀಯ ಕೀಟನಾಶಕ ಮಂಡಳಿ ಮತ್ತು ನೊಂದಣಿ ಸಮಿತಿಯಿಂದ ನೊಂದಣಿ ಪಡೆದು ಕೀಟನಾಶಕ ಕಾಯ್ದೆಯ ಸೆಕ್ಷನ್ 13 ಮತ್ತು ಕೀಟನಾಶಕ ನಿಯಮಗಳು, 1971 ರ ನಿಯಮ 10ರನ್ವಯ ಕೀಟನಾಶಕ ತಯಾರಿಕಾ ಪರವಾನಗಿ ಪಡೆಯುವುದು ಕಡ್ಡಾಯವಾಗಿರುತ್ತದೆ. ಯಾವುದೇ ಸಂಸ್ಥೆಗೆ ಪೀಡೆನಾಶಕದ ನೊಂದಣಿಯನ್ನು ನೀಡುವ ಮೊದಲು ಪೀಡೆನಾಶಕದ ಕ್ರಿಯಾಘಟಕದೊಂದಿಗೆ ಸಂಯೋಜನೆ, ವಿಷಶಾಸ್ತ್ರ ಅಧ್ಯಯನ, ಬಹು ಸ್ಥಳದ ಪ್ರಯೋಗಗಳ ವರದಿ, ನಿರ್ದಿಷ್ಟ ಬೆಳೆಗಳ ಮೇಲೆ ಕೈಗೊಂಡ ಪ್ರಯೋಗಗಳ ವರದಿಗಳನ್ನು ಪರಿಶೀಲಿಸಿ ನೊಂದಣಿಯನ್ನು ನಿರ್ದಿಷ್ಟಪಡಿಸಿದ ಬೆಳೆ ಮತ್ತು ಪೀಡೆಗಳಿಗೆ ಶಿಫಾರಸ್ಸು ಮಾಡಿ ನೊಂದಣಿ ಪ್ರಮಾಣ ಪತ್ರಗಳನ್ನು ಕೇಂದ್ರೀಯ ಕೀಟನಾಶಕ ಮಂಡಳಿ ಮತ್ತು ನೊಂದಣಿ ಸಮಿತಿಯ ವತಿಯಿಂದ ನೀಡಲಾಗುತ್ತಿದೆ.

ಕೀಟನಾಶಕ ಮಂಡಳಿ ಮತ್ತು ನೊಂದಣಿ ಸಮಿತಿ ಶಿಫಾರಸ್ಸು ಮಾಡಿರುವ ಬೆಳೆ, ಪೀಡೆ ಮತ್ತು ಪ್ರಮಾಣದಲ್ಲಿ ಬಳಕೆ ಮಾಡುವ ಬಗ್ಗೆ ಕೀಟನಾಶಕದ ಲೇಬಲ್ ಮತ್ತು ಹಸ್ತ ಪತ್ರದಲ್ಲಿ ಮುದ್ರಿಸಿ ಕೀಟನಾಶಕಗಳನ್ನು ಮಾರಾಟ ಮಾಡುವುದು ಕಡ್ಡಾಯವಾಗಿರುತ್ತದೆ. ಕೀಟನಾಶಕಗಳನ್ನು ತಯಾರಿಸಿ ಮಾರುಕಟ್ಟೆಗೆ ಬರುವ ಮುನ್ನ ತಯಾರಿಕಾ ಘಟಕದಲ್ಲಿಯೇ ಪರೀಕ್ಷಿಸಿ ನಂತರ ಪ್ಯಾಕಿಂಗ್ ಮಾಡುವುದು ಕೀಟನಾಶಕ ಕಾಯ್ದೆ ಮತ್ತು ನಿಯಮಗಳನ್ವಯ ಕಡ್ಡಾಯವಾಗಿರುತ್ತದೆ.

ಆದಾಗ್ಯೂ ಮಾರುಕಟ್ಟೆಯಲ್ಲಿ ಮಾರಾಟವಾಗುವ ಕೀಟನಾಶಕಗಳ ಗುಣಮಟ್ಟವನ್ನು ಪರೀಕ್ಷಿಸಲು ಇಲಾಖೆಯಲ್ಲಿ ಕೃಷಿ ಪದವಿಯನ್ನು ಹೊಂದಿರುವ ರೈತ ಸಂಪರ್ಕ ಕೇಂದ್ರದ ವ್ಯಾಪ್ತಿಯಲ್ಲಿ ಸಹಾಯಕ ಕೃಷಿ ಅಧಿಕಾರಿ, ಕೃಷಿ ಅಧಿಕಾರಿ, ತಾಲ್ಲೂಕು ಮಟ್ಟದಲ್ಲಿ ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಅಧಿಕಾರಿ, ವಿಭಾಗೀಯ ಮಟ್ಟದಲ್ಲಿ ಉಪ ಕೃಷಿ ನಿರ್ದೇಶಕರು, ಕೃಷಿ ಅಧಿಕಾರಿ, ಜಿಲ್ಲಾ ಮಟ್ಟದಲ್ಲಿ ಜಂಟಿ ಕೃಷಿ ನಿರ್ದೇಶಕರು, ಸಹಾಯಕ ಕೃಷಿ ನಿರ್ದೇಶಕರು ಮತ್ತು ಕೃಷಿ ಅಧಿಕಾರಿಗಳನ್ನು ಹಾಗು ಇಲಾಖೆಯ ಜಾರಿ ದಳದ ಅಧಿಕಾರಿಗಳನ್ನು ಕೀಟನಾಶಕ ಪರಿವೀಕ್ಷಕರನ್ನಾಗಿ ಅಧಿಸೂಚನೆಗೊಳಿಸಲಾಗಿರುತ್ತದೆ. ಕೃಷಿ ನಿರ್ದೇಶಕರು, ಅಪರ ಕೃಷಿ ನಿರ್ದೇಶಕರು (ಸಾವಯವ ಕೃಷಿ), ಜಂಟಿ ಕೃಷಿ ನಿರ್ದೇಶಕರು (ರಸಗೊಬ್ಬರ ಮತ್ತು ಸಸ್ಯ ಸಂರಕ್ಷಣೆ), ಜಂಟಿ ಕೃಷಿ ನಿರ್ದೇಶಕರು (ಸಾವಯವ ಕೃಷಿ ಮತ್ತು ಪ್ರಯೋಗಾಲಯಗಳು)

ಮತ್ತು ಉಪ ಕೃಷಿ ನಿರ್ದೇಶಕರು (ಸಸ್ಯ ಸಂರಕ್ಷಣೆ), ಕೃಷಿ ಆಯುಕ್ತಾಲಯ, ಅಪರ ಕೃಷಿ ನಿರ್ದೇಶಕರು (ಜಾಗೃತ ಕೋಶ), ಸಚಿವಾಲಯ ವಿಭಾಗ, ಬೆಂಗಳೂರು ಅಧಿಕಾರಿಗಳನ್ನು ರಾಜ್ಯ ಮಟ್ಟದ ಕೀಟನಾಶಕ ಪರಿವೀಕ್ಷಕರನ್ನಾಗಿ ಅಧಿಸೂಚನೆಗೊಳಿಸಲಾಗಿರುತ್ತದೆ. ಕೀಟನಾಶಕ ಪರಿವೀಕ್ಷಕರಿಂದ ನಿಯಮಿತವಾಗಿ ಕೀಟನಾಶಕ ತಯಾರಿಕೆ ಮತ್ತು ಮಾರಾಟ ಮಳಿಗೆಗಳ ತಪಾಸಣೆಯನ್ನು ಕೈಗೊಂಡು ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಲಾಗುತ್ತಿದೆ.

ರಾಜ್ಯದಲ್ಲಿ ವಾರ್ಷಿಕವಾಗಿ 6800 ಮಾದರಿಗಳ ಸಂಗ್ರಹಣೆ ಗುರಿಯನ್ನು ಕೀಟನಾಶಕ ಪರಿವೀಕ್ಷಕರುಗಳಿಗೆ ನೀಡಲಾಗಿರುತ್ತದೆ. ವಿಶ್ಲೇಷಣೆಯಲ್ಲಿ ಕಳಪೆ ಗುಣಮಟ್ಟವೆಂದು ವರದಿಯಾದ ಮಾದರಿಗಳ ಕೀಟನಾಶಕ ತಯಾರಕರ ಮತ್ತು ಮಾರಾಟಗಾರರ ವಿರುದ್ಧ ಕೀಟನಾಶಕ ಕಾಯ್ದೆ, 1968 ಮತ್ತು ಕಾಯ್ದೆಯನ್ವಯ ರೂಪಿಸಲಾಗಿರುವ ನಿಯಮಗಳನ್ವಯ ಆಡಳಿತಾತ್ಮಕ ಮತ್ತು ಕಾನೂನು ಕ್ರಮಗಳನ್ನು ಜರುಗಿಸಲಾಗುತ್ತಿದೆ. 2020-21ನೇ ಸಾಲಿನಲ್ಲಿ 5390 ಪೀಡೆನಾಶಕ ಮಾದರಿಗಳನ್ನು ಗುಣಮಟ್ಟ ವಿಶ್ಲೇಷಣೆಗೆ ಒಳಪಡಿಸಲಾಗಿದ್ದು, ವಿಶ್ಲೇಷಣೆಯಲ್ಲಿ 66 ಪೀಡೆನಾಶಕಗಳು ಕಳಪೆ ಎಂದು ವರದಿಯಾಗಿರುತ್ತವೆ. 2021-22 ನೇ ಸಾಲಿನಲ್ಲಿ ಜನವರಿ 2022ರ ಅಂತ್ಯಕ್ಕೆ 4401 ಪೀಡೆನಾಶಕ ಮಾದರಿಗಳನ್ನು ಗುಣಮಟ್ಟ ವಿಶ್ಲೇಷಣೆಗೆ ಒಳಪಡಿಸಲಾಗಿದ್ದು, ವಿಶ್ಲೇಷಣೆಯಲ್ಲಿ 59 ಪೀಡೆನಾಶಕಗಳು ಕಳಪೆ ಎಂದು ವರದಿಯಾಗಿರುತ್ತವೆ. ಕಳಪೆ ಎಂದು ವರದಿಯಾದ ಪೀಡೆನಾಶಕಗಳ ತಯಾರಕರ ಮತ್ತು ಮಾರಾಟಗಾರರ ವಿರುದ್ಧ ಆಡಳಿತಾತ್ಮಕ ಮತ್ತು ಕಾನೂನು ರೀತ್ಯ ಕ್ರಮಗಳನ್ನು ಜರುಗಿಸಲಾಗುತ್ತಿದೆ.

ಸಂಖ್ಯೆ: AGRI-ACT/45/2022

(ಬಿ.ಸಿ. ಪಾಟೀಲ್)
ಕೃಷಿ ಸಚಿವರು